ನಿಯಮ 60 ರಲ್ಲಿ ಪ್ರಸ್ತಾಪಿಸಿದ್ದಾರೆ. ಈ ವಿಚಾರವಾಗಿ ಈಗಾಗಲೇ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆಯೂ ಚರ್ಚೆಗೆ ಅವಕಾಶ ಇದೆ. ಆದರೂ ವಿಚಾರದ ಗಂಭೀರತೆಯನ್ನು ಅರಿತು ನಿಯಮ 69 ರಡಿಯಲ್ಲಿ ಈ ವಿಷಯಕ್ಕೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ"

ಶ್ರೀ ಹೆಚ್. ಡಿ. ರೇವಣ್ಣ: ಅಧ್ಯಕ್ಷರೆ, ನಿಯಮ 60 ರಲ್ಲದರೂ ಚರ್ಚೆಗೆ ಅವಕಾಶ ಕೊಡಿ ಅಥವಾ ನಿಯಮ 69 ರಲ್ಲಾದರೂ ಚರ್ಚೆಗೆ ಅವಕಾಶ ಕೊಡಿ. ದಯಮಾಡಿ ಇವತ್ತೇ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು: ಆಯಿತು. ಮಧ್ಯಾಹ್ನ 1.00 ಘಂಟೆಗೆ ತಮಗೆ ಚರ್ಚೆಗೆ ಅವಕಾಶ ಕೊಡುತ್ತೇನೆ.

ಈಗ ಶಾಸನ ರಚನೆ. ಶ್ರೀ ವಿ. ಎಸ್. ಆಚಾರ್ಯರವರು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ವಿಧೇಯಕ, 2011, ವಿಧೇಯಕವನ್ನು ಪರ್ಯಾಲೋಚಿಸಲು ಮಂಡಿಸಿ.

2. ಶಾಸನ ರಚನೆ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ವಿಧೇಯಕ, 2011

ಶ್ರೀ ವಿ. ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2011ನೇ ಸಾಲಿನ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ನಾನು ವಿನಂತಿಸುತ್ತಿದ್ದೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ವಿ. ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕದ ವೈವಿಧ್ಯಮಯ ಜಾನಪದ ಶ್ರೀಮಂತಿಕೆಯ ಪದರುಗಳಾದಂಥ ಜನಪದ ಸಾಹಿತ್ಯ, ಸಂಗೀತ, ನೃತ್ಯ, ರಂಗ, ವೈವಿಧ್ಯತೆ ಮತ್ತು ಇತರ ಬುಡಕಟ್ಟು ಜನಾಂಗದವರ ಕಲೆ ಮತ್ತು ಸಂಸ್ಕೃತಿ ಇವುಗಳನ್ನು ಅಧ್ಯಯನ,

ಅಧ್ಯಾಪನ, ಸಂಶೋಧನೆ, ಪ್ರಕಟಣೆ ಮತ್ತು ಪ್ರಚಾರ ಇವುಗಳ ಮೂಲಕ ಅನಾವರಣಗೊಳಿಸಿ ಕರ್ನಾಟಕ ಜಾನಪದ ಶ್ರೀಮಂತಿಕೆಯನ್ನು ಜಾಗತಿಕ ವೇದಿಕೆಯವರೆಗೂ ತೆಗೆದುಕೊಂಡು ಹೋಗುವಂಥ ಪ್ರಯತ್ನದ ಫಲವಾಗಿ ಈ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಬೇಕೆಂದು ಇಂತಹ ಸುಮಾರು 20 ಅಂಶಗಳನ್ನೊಳಗೊಂಡಂಥ ಪ್ರಸ್ತಾವನೆ ಇದಾಗಿದೆ. ಜಗತ್ತಿನಲ್ಲೇ ಬಹುಶಃ ಜಾನಪದ ವಿಶ್ವವಿದ್ಯಾಲಯ ಎಂದು ಹೇಳುವುದು ಪ್ರಪ್ರಥಮ ಬಾರಿ ನಮ್ಮ ಪ್ರಯತ್ನ ನಡೆದಿದೆ. ವಿಧಾನಮಂಡಲದ ಅಧಿವೇಶನ ಇಲ್ಲದಿದ್ದಾಗ ಸಚಿವ ಸಂಪುಟದ ತೀರ್ಮಾನದಂತೆ ಮಾನ್ಯ ರಾಜ್ಯಪಾಲರ ಒಪ್ಪಿಗೆ ಪಡೆದು ಈಗಾಗಲೇ ಒಂದು ಅಧ್ಯಾದೇಶ ಜಾರಿಗೆ ಬಂದಿದೆ. ಇವತ್ತು ಆ ಅಧ್ಯಾದೇಶವನ್ನು replace ಮಾಡುವಂಥ ಒಂದು ವಿಧೇಯಕವನ್ನು ನಾನು ತರುತ್ತಿದ್ದೇನೆ. ಬಹಳ ಪ್ರಮುಖವಾದುದೇನೆಂದರೆ, ತಜ್ಞರು, ಜಾನಪದ ವಿದ್ವಾಂಸರು ಈಗಾಗಲೇ ಸ್ಥಳ ಪರಿಶೀಲನೆ ಮಾಡಿ ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲ್ಲೂಕಿನ ಗೊಟಗೋಡಿ ಎಂಬಲ್ಲಿ ಒಳ್ಳೆಯ ಪ್ರಶಸ್ತವಾದ ಸ್ಥಳವನ್ನು ಆಯ್ಕೆ ಮಾಡಿದ್ದಾರೆ. ಅಲ್ಲಿ ಸುಮಾರು 70–75 ಎಕರೆ ಸರ್ಕಾರಿ ಭೂಮಿ ಇದೆ. ಎತ್ತರ ಪ್ರದೇಶದಲ್ಲಿ ಒಟ್ಟು 173 ಎಕರೆಯಲ್ಲಿ 75 ಎಕರೆ ನಮ್ಮ ವಶಕ್ಕೆ ಬಂದಿದೆ. Water body ಇದೆ. ಪ್ರವಾಸೋದ್ಯಮ ಇಲಾಖೆಯ ಒಂದು ಕಟ್ಟಡ ಪ್ರಾರಂಭಿಸಲಿಕ್ಕೆ ಬೇಕಾದ ವ್ಯವಸ್ಥೆಯೂ ಇದೆ. ರಸ್ತೆ, ರೈಲು, ವಿಮಾನ ನಿಲ್ದಾಣ ಎಲ್ಲದಕ್ಕೂ ಸಮೀಪವಾಗಿರತಕ್ಕಂಥ ಒಂದು ಜಾಗವಾಗಿದೆ. ಮಧ್ಯ ಕರ್ನಾಟಕದ ಜಾಗದಲ್ಲಿ ಆಗಬೇಕೆಂದು ತಜ್ಞರು ನಿಶ್ಚಯಿಸಿದ ಪ್ರಕಾರ ನಾವು ಯೋಚನೆ ಮಾಡಿದ್ದೇವೆ. ಈಗಾಗಲೇ ಜಾನಪದ ವಿದ್ವಾಂಸರಾದಂಥ ಡಾ॥ ಅಂಬಳಿಕೆ ಹಿರಿಯಣ್ಣನವರು ಮುಖ್ಯ ಅಧಿಕಾರಿಗಳಾಗಿ, ವಿಶೇಷ ಅಧಿಕಾರಿಗಳಾಗಿ ಈಗ ಪ್ರಥಮ ಉಪಕುಲಪತಿಗಳಾಗಿಯೂ ಅವರು ಕೆಲಸ ಮಾಡುತ್ತಿದ್ದಾರೆ. ಇದರ ಬಗ್ಗೆ ಆರಂಭಿಕ ಖರ್ಚು ವೆಚ್ಚಗಳ ಬಗ್ಗೆ ಸುಮಾರು 2.50 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ವಿಶ್ವವಿದ್ಯಾಲಯದ ರಚನೆ ಆರು ನಿಖಾಯಗಳಿರುತ್ತವೆ. 16 ಅಧ್ಯಯನ ವಿಭಾಗಗಳಿರುತ್ತವೆ ಇದೊಂದು Constituent University ಅಂದರೆ affiliating University ಅಲ್ಲ, ಪ್ರತಿಯೊಂದು ಕಾರ್ಯಾಲಯದಲ್ಲಿ ಅದರ ಎಲ್ಲಾ ವಿಭಾಗಗಳಿರುತ್ತವೆ. ಆದರೆ,

ನಮ್ಮ ರಾಜ್ಯದ ಪ್ರಮುಖ ಜಾನಪದ ಕೇಂದ್ರಗಳಾದ, ಈಗಾಗಲೇ ಕೆಲಸ ಮಾಡುತ್ತಿರುವಂತಹ ಬೆಂಗಳೂರು ಬಳಿ ಇರುವ ರಾಮನಗರದ ಜಾನಪದ ಲೋಕವಿರಬಹುದು, ಮಂಗಳೂರಿನ ಡಾ॥ ಶಿವರಾಂ ಕಾರಂತರವರ ಪಿಲಿಕುಳ ಕೇಂದ್ರವಿರಬಹುದು, ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಸಂಸ್ಥೆ ಮತ್ತು ಜಾನಪದ ಸಂಸ್ಥೆಯಿರಬಹುದು, ಶಿರಸಿಯ ಸಂಸ್ಥೆಯಿರಬಹುದು, ಧಾರವಾಡದ ಸಂಸ್ಥೆಗಳೂ ಅದೇ ರೀತಿ ಬಿಜಾಪುರದ Archeology ಮತ್ತು ಜಾನಪದ ಇರತಕ್ಕಂತಹವು. ಇಡೀ ರಾಜ್ಯದ ಬೇರೆ ಬೇರೆ ಜಾನಪದ ಕೇಂದ್ರಗಳನ್ನು recognize ಮಾಡಿ, ಅಲ್ಲಿಂದ ಬೇಕಾದಂತಹ ಮಾಹಿತಿಯನ್ನು ಪಡೆಯುವಂತಹ ಒಂದು ಸಂಸ್ಥೆ, ಡಿಪ್ಲೋಮಾ, ಡಿಗ್ರಿ, ಪೋಸ್ಟ್ ಗ್ರಾಜ್ಯುಯೇಷನ್ ಮತ್ತು ಡಾಕ್ಟರೇಟ್ ಕೊಡುವಂಥಹ ವ್ಯವಸ್ಥೆಗಳಿವೆ. ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ವ್ಯವಸ್ಥೆಗಳಿವೆ. ಈ ದೃಷ್ಟಿಯಿಂದ ಒಂದು ಪ್ರಥಮ ಪ್ರಯತ್ನ ಇಡೀ ದೇಶದಲ್ಲಿ ಮತ್ತು ಜಗತ್ತಿನಲ್ಲಿ ಆಗುತ್ತಿರುವಂತಹದ್ದಕ್ಕೆ ಈ ಸದನ ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಏನಾದರೂ ಪ್ರಶ್ನೆಗಳನ್ನು ತಾವು ಕೇಳುವುದು ಇದ್ದರೆ ಕೇಳಬಹುದು.

ಶ್ರೀ ಟಿ. ಬಿ. ಜಯಚಂದ್ರ (ಶಿರಾ): ಮಾನ್ಯ ಅಧ್ಯಕ್ಷರೆ, ಇವತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ವಿದೇಯಕವನ್ನು ನಾನು ಆತ್ಮೀಯವಾಗಿ ಸ್ವಾಗತಿಸುತ್ತಿದ್ದೇನೆ. ಬಹಶಃ ಅದು ಒಂದು ವಿಶಿಷ್ಟವಾಗಿರುವಂತಹ ಚಿಂತನೆ. ಈ ನೆಲಮೂಲ, ನಾಡ ಸಂಸ್ಕೃತಿ, ಸಂಪ್ರದಾಯ, ಪರಂಪರೆ, ಹಾಡುಗಾರಿಕೆ, ಜಾನಪದ ಸಾಹಿತ್ಯ ಎಲ್ಲವನ್ನೂ ಕೂಡ ಉಳಿಸುವಂತಹ ರೀತಿಯಲ್ಲಿ ಒಂದು ವಿಶ್ವವಿದ್ಯಾಲಯವನ್ನು ಮಾಡಬೇಕು ಎನ್ನುವ ಚಿಂತನೆ ಸ್ವಾಗತಾರ್ಹ, ಆದರೆ, ನೀವು ಅಧಿಕಾರಕ್ಕೆ ಬಂದಾಗ ಬಹಳಷ್ಟು ವಿಶ್ವವಿದ್ಯಾಲಯಗಳನ್ನು ಮಾಡಿದ್ದೀರಿ. ಕೃಷಿ ಇರುವ ಕಡೆಗೆ ನಾಲ್ಕು ಮಾಡಿದೀರಿ ಅದು ಬೇರೆ. ಆದರೆ, ಇದರಲ್ಲಿ ವಿಶಿಷ್ಟತೆ ಇದೆ. ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಇವತ್ತು ನಿಮ್ಮ ಉದ್ದೇಶವೇನೆಂದರೆ, ಇದು ಬಹುಶಃ ನನಗೆ ಅರಿವಿರುವಂತೆ ಈ ದೇಶದಲ್ಲಿ ಎಲ್ಲಿಯೂ ಕೂಡ ಈ ರೀತಿಯಾದಂತಹ ಒಂದು ವಿಶ್ವವಿದ್ಯಾಲಯ ಇದ್ದ ಹಾಗೆ ಕಾಣಲಿಲ್ಲ. ಬಹುಶಃ ಈ ರೀತಿಯಾಗಿರುವಂತಹ ನೆಲಮೂಲವನ್ನು ನಡೆಸುವವರು ಎಂದರೆ ತಮಿಳುನಾಡಿನವರು. ತಮಿಳುನಾಡಿರಬಹುದು ಅಥವಾ

ಮಹಾರಾಷ್ಟ್ರವಿರಬಹುದು ಅಥವಾ ಉತ್ತರ ಪ್ರದೇಶದ ಗುಡ್ಡಗಾಸು ಪ್ರದೇಶದಲ್ಲಿರತಕ್ಕಂತಹ ಬುಡಕಟ್ಟು ಜನಾಂಗದವರು ಮಾಡಬಹುದು. ಅಲ್ಲಿಯೂ ಕೂಡ ಆ ಪ್ರಯತ್ನಗಳಾಗದೇ ಇಲ್ಲಿ ಮಾಡಿದ್ದೀರಿ. ಬಹಳ ಮುಖ್ಯವಾಗಿರುವಂತಹ ಒಂದು ವಿಚಾರವನ್ನು ಇದರಲ್ಲಿ ಅಡಕ ಮಾಡಬೇಕಾಗುತ್ತದೆ. ಕರ್ನಾಟಕದ ಭೌಗೋಳಿಕ ಪ್ರದೇಶವನ್ನು ನೀವು ತೆಗದುಕೊಂಡಾಗ ಸುತ್ತಮುತ್ತ ಇರುವಂತಹ ಬೇರೆ ಬೇರೆ ರಾಜ್ಯಗಳು, ಮಹಾರಾಷ್ಟ್ರವಿರಬಹುದು, ಆಂಧ್ರವಿರಬಹುದು ಅಥವಾ ಬೇರೆ ಬೇರೆ ರಾಜ್ಯಗಳು ನಮ್ಮ ಬುಡಕಟ್ಟು ಜನಾಂಗದ ಸಂಸ್ಕೃತಿಯ ಮೇಲೆ ಪ್ರಭಾವ ಬೀರತಕ್ಕಂತಹ ರೀತಿಯಲ್ಲಿ, ಈ border areas ನಲ್ಲಿ ಅದೇ ಒಂದು ರೀತಿಯಾದಂತಹ ವಿಶಿಷ್ಟವಾಗಿರುವಂತಹ ಸಂಸ್ಕೃತಿ ಹೊರಬಂದಿದೆ. ಏಕೆಂದರೆ, ಪ್ರತಿ ವರ್ಷವೂ ಕೂಡ ಈ ರೀತಿಯಾಗಿ ಜಾನಪದಕ್ಕೆ ಸಂಬಂಧಪಟ್ಟಂತಹ ಸಮಾವೇಶಗಳನ್ನು ನಾನು ನನ್ನ ತಾಲ್ಲೂಕಿನಲ್ಲಿ ಕಳೆದ ಮೂರು-ನಾಲ್ಕು ವರ್ಷಗಳಿಂದ ಮಾಡುತ್ತಿದ್ದೇನೆ. ಪ್ರತಿ ವರ್ಷ ಕೂಡ ನಾನು ಮಾಡುತ್ತೇನೆ. ನಾನು ಭಿನ್ನತೆಯನ್ನು ಕಂಡಿರುವುದು ಎಂದರೆ ಕರ್ನಾಟಕಕ್ಕೆ ಸೇರಿದಂತಹ ಮೂಲ ಬುಡಕಟ್ಟು ಜನ ಏನಿದ್ದಾರೆ. ಅವರ Dravidian culture ಇರುವಂತಹವರ ಸಂಸ್ಕೃತಿ, ಹಾಡುಗಾರಿಕೆ ಒಂದು ರೀತಿ ಇರುತ್ತದೆ. ಆ ಗಡಿನಾಡಿನಲ್ಲಿರತಕ್ಕಂತಹವರದೇ ಒಂದು ರೀತಿ ಇರುತ್ತದೆ. ಅದು ವೈಶಿಷ್ಟ್ಯ ಅದು ಒಂದಕ್ಕೊಂದನ್ನು ತಾಳೆ ಮಾಡಿ ನೋಡಿದಾಗ ಎಷ್ಟೊಂದು ನಮ್ಮ ಸಂಸ್ಕೃತಿ ಶ್ರೀಮಂತಗೊಂಡಿದೆ ಎಂಬುದು ಗೊತ್ತಾಗುತ್ತದೆ. ನಮ್ಮ ಸಂಸ್ಕೃತಿ ಬದಲಾವಣೆಯಾಗಿಲ್ಲ, ಹಾಡಿನಲ್ಲಿ ಬದಲಾವಣೆಯಾಗಿಲ್ಲ. ಪ್ರಸಗಳು ಬದಲಾವಣೆಯಾಗಿಲ್ಲ. ಲಯಗಳು ಬಲಾವಣೆಯಾಗಿಲ್ಲ. ಎಲ್ಲವೂ ಕೂಡ ಬದಲಾವಣೆಯಾಗದೇ ಇನ್ನಷ್ಟು ಶ್ರೀಮಂತಗೊಳಿಸತಕ್ಕಂತಹ ರೀತಿಯಲ್ಲಿ, ಅಂದರೆ ಬೇರೆ ಬೇರೆ ರಾಜ್ಯದಲಿರತಕ್ಕಂತಹ ಸಂಸ್ಕೃತಿಯನ್ನು ಆಕರ್ಷಣೆ ಮಾಡಿ ತನ್ನದಾಗಿಸಿಕೊಂಡಿರುವಂತಹ ಒಂದು ಶ್ರೀಮಂತ ಸಂಸ್ಕೃತಿ ಕರ್ನಾಟಕದ್ದು ಎಲ್ಲೋ ಒಂದು ಕಡೆ ಇದನ್ನು ದೇಶ ಮಟ್ಟದಲ್ಲಿ ಪ್ರಪಂಚ ಮಟ್ಟದಲ್ಲಿ ಬಿಂಬಿಸುವಂತಹ ರೀತಿಯಲ್ಲಿ ಆಗಬೇಕಾಗಿತ್ತು. ನನಗೆ ಗೊತ್ತಿರುವುದು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಂದು ಮೈಸೂರುಇಗೆ ಹೋಗುವ ದಾರಿಯಲ್ಲಿ ಇರುವ ನಮ್ಮ ಮಾನ್ಯ ನಾಗೇಗೌಡರ ಒಂದು ಸಂಸ್ಥೇಬಿಟ್ಟರೆ ಬಹುಶಃ ಇನ್ನು

ಯಾವ ರೀತಿಯಾಗಿಯೂ ಅದು ಇಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಇದನ್ನು ನಾನು ಓದುತ್ತಲೇ ಅಂದುಕೊಂಡೆ. ನೀವು ಮಧ್ಯಮ ಕನಾಟಕದ ದೃಷ್ಟಿಯನ್ನು ಇಟ್ಟುಕೊಂಡು, ಬಹುಶಃ ನನಗನಿಸುತ್ತದೆ, ಇದು ಬಸವರಾಜ್ ಬೊಮ್ಮಾಯಿರವರ ಪ್ರಭಾವವಲ್ಲವೆಂದು ಎಂದುಕೊಮಡರೂ ಕೂಡ, ಉತ್ತರ ಕರ್ನಾಟಕಲ್ಲಿರತಕ್ಕಂತಹ ಕಲೆಯಿದೆಯಲ್ಲಾ ಅದು ನಿಜವಾಗಿಯೂ ಆ ಬಾಷೆ, ಆ ಸಾಹಿತ್ಯ ಅದನ್ನು ಹೊಗಳಬೇಕಗುತ್ತದೆ. ನಮ್ಮ ದಕ್ಷಿಣ ಕನಟಕ ಮತ್ತು ಉತ್ತರ ಕನಟಕದ ಭಾಷೆಯಲ್ಲಿನ ಸಾಹಿತ್ಯಮಯವಾಗಿರುವಂತಹ ಪದಗಳನ್ನು ನಾವು ಎಲ್ಲಿಯೂ ನೋಡುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ನೀವು ಸೂಕ್ತವಾದಂತಹ ಜಾಗವನ್ನು select ಮಾಡಿದ್ದೀರಿ. ಆದರೆ, ಅದು ಕೇವಲ ಸಾಂಕೇತಿಕವಾಗಿ ಒಂದು ಬೋರ್ಡ್ ಬರೆದು, ಅದಕ್ಕೆ ಒಬ್ಬರು ವೈಸ್ ಚಾನ್ಸಲರ್ ಇಟ್ಟರೆ ಅದು ಸಾಧ್ಯವಾಗುವುದಿಲ್ಲ. ಅದಕ್ಕೆ ತನ್ನದೇ ಆದ ರೀತಿಯಲ್ಲಿ ನಾನು ಹೇಳಿದ್ದು ಗಡಿಹಾಡ ಪ್ರದೇಶ South Karnataka, North Karnataka ಮತ್ತು Bombay Karnataka ಎಲ್ಲಾ ಕರ್ನಾಟಕದಲ್ಲಿಯೂ ಕೂಡ ಇರತಕ್ಕಂತಹ ಬುಡಕಟ್ಟು ಜನಾಂಗದ ಕಲೆಗಳು ಏನಿದೆ, ಆ ಕಲೆಗಳನ್ನು ಸಂಗ್ರಹಿಸಿ, ಪ್ರೋತ್ಸಾಹಿಸಿ ಅದನ್ನು ಜೀವಂತವಾಗಿರಿಸಬೇಕು. ಅದಕ್ಕೆ ಪ್ರೋತ್ಸಾಹ ಮಾಡಬೇಕಾದರೆ ನೀವು ಡಿಗ್ರಿ, ಡಿಪ್ಲೋಮಾಗಳನ್ನು ಕೊಡುವುದರ ಜೊತೆಗೆ, ಅದು ನಮ್ಮ ಮುಂದೆ ಬರತಕ್ಕಂತಹ ನಾಟಕಗಳಲ್ಲಿ, ಆ ನಾಟಕ ಅನ್ನುವ ಕಲೆ ಮರೆತು ಹೋಗುತ್ತಿದೆ. ಅದಕೆಕ ಮೂಲವಾಗಬೇಕು. ನಮ್ಮಲ್ಲಿ ಬರತಕ್ಕಂತಹ ಸಿನಿಮಾಗಳು ಏನಿದೆ ಅದಕ್ಕೆ ಮೂಲ ಒದಗಿಸುವಂತಹ ರೀತಿಯಲ್ಲಿ ಆಗಬೇಕಾಗುತ್ತದೆ ಎನ್ನುವ ಮಾತನ್ನು ಹೇಳುತ್ತಾ ಬಹುಶಃ ಇದನ್ನು ಆದಷ್ಟುಬೇಗ ಮಾಡಿ. ಇದಕ್ಕೆ ಮಾಡಬೇಕಾದಂತಹ ರೀತಿಯಲ್ಲಿ, ವಿಶಿಷ್ಟವಾದಂತಹ ರೀತಿಯಲ್ಲಿ ಎಲ್ಲರನ್ನೂ ಕೂಡ ಅದಕ್ಕೆ ಕಲೆಗೋಸ್ಕರ ಶ್ರಮಿಸಿದಂತಹವರನ್ನು, ಕಲೆಗೋಸ್ಕರ ತ್ಯಾಗ ಮಾಡಿದಂತಹವರು ಏನಿದ್ದಾರೆ, ಆ ಸಂಸ್ಕೃತಿ ಉಳಿಸುವುದಕ್ಕೋಸ್ಕರ ಪ್ರಯತ್ನಪಟ್ಟಂತಹ ಜನರು ಏನಿದ್ದಾರೆ, ವಯಸ್ಸಾಗಿರುವಂತಹ ಅವಿದ್ಯಾವಂತರುಗಳಿದ್ದಾರೆ. ವಿದ್ಯಾವಂತರು ಅಲ್ಲದೇ ಇದ್ದರೂ ಕೂಡ ಅವರ ಪಾಂಡಿತ್ಯವನ್ನು ನಾವು ಹೇಳುವುದಕ್ಕೆ ಸಾಧ್ಯವಿಲ್ಲ. ಅಂತಹ ಜನರನ್ನು ಎಲ್ಲರನ್ನೂ ಕೂಡ ಒಂದು ಕಡೆಗೆ ಕರೆಸಿ, ಮೊದಲು ಅವರನ್ನು ಗುರುತಿಸಿ, ನಂತರ

ಕರೆಸಿ ಒಂದು ಕಡೆ ಯೂನಿವರ್ಸಿಟಿಯಲ್ಲಿ ಅದನ್ನು ಬೆಳೆಸತಕ್ಕಂತಹ, ಆ ರೀತಿಯಾದಂತಹ ಶ್ರೀಮಂತಿಕೆ ಇದೆ. ಏಕೆಂದರೆ, ಇದನ್ನು ಬೇರೆ ಯೂನಿವರ್ಸಿಟಿಗಳ ಟೈಪ್ ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ತನ್ನದೇ ಅಗಿರುವಂತಹ ರೀತಿಯಲ್ಲಿ ಸ್ಪಂದನೆ ಇರತಕ್ಕಂತಹ ರೀತಿಯಲ್ಲಿ ಮಾಡಬೇಕಾಗುತ್ತದೆ. ನಮ್ಮ ನಾಡ ಸಂಸ್ಕೃತಿಯನ್ನು ಉಳಿಸಬೇಕಾಗಿರುವಂತಹ ಈ ಜಾನಪದ ವಿಧೇಯಕವನ್ನು ನಾನು ಆತ್ಮೀಯವಾಗಿ ಸ್ವಾಗತಿಸುತ್ತೇನೆ.

ಡಾ॥ ವಿ. ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು): ಮಾನ್ಯ ಅಧ್ಯಕ್ಷರೆ, ಸುಮಾರು 20 ಪ್ರಮುಖ ಧ್ಯೇಯೋದ್ದೇಶಗಳಿವೆ ಎಂದು ನಾನು ಹೇಳಿದೆ. ಮೂರನೇ ಪುಟದಿಂದ ನಾಲ್ಕನೇ ಪುಟದವರೆಗೆ ತಮಗೆ ಕೊಟ್ಟಿರುವಂತಹ ಬಿಲ್‌ನಲ್ಲಿ, ತಾವು ಹೇಳಿದಂತಹ ಎಲ್ಲಾ ವಿಷಯಗಳು ಇವೆ. ಮಧ್ಯ ಕರ್ನಾಟಕದ ಒಂದು ಕೇಂದ್ರ ರಾಷ್ಟ್ರೀಯ ಹೆದ್ದಾರಿ, ರೈಲ್ವೆ, ವಿಮಾನ ನಿಲ್ದಾಣದಿಂದ ಒಂದು ಘಂಟೆಯೊಳಗೆ ಹೋಗಬಹುದು ಎಂದು ಹೇಳುವಂತಹ ಜಾಗದ ಬಗ್ಗೆ ಪ್ರಶ್ನೆ ಬಂದಾಗ ನಮ್ಮ ಜಾನಪದ ಅಕಾಡೆಮಿಯವರು ಮತ್ತು ಇತರೆ ತಜ್ಞರು ನಾವೆಲ್ಲರೂ ಹೋಗಿ ನೋಡಿದಂತಹ ಜಾಗ ಅದು. ಅದನ್ನು ನೋಡಿಕೊಂಡು Select ಮಾಡಿದ್ದೇವೆ. ತಮ್ಮ ಸ್ವಾಗತಕ್ಕೋಸ್ಕರ ಧನ್ಯವಾದಗಳು.

ಅಧ್ಯಕ್ಷರು: ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2011ನೇ ಸಾಲಿನ ಜಾನಪದ ವಿಶ್ವವಿದ್ಯಾಲಯ ವಿಧೇಯಕವನ್ನು ಈ ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ

ಖಂಡ 2 ರಿಂದ 76 ರವರೆಗೆ

ಅಧ್ಯಕ್ಷರು: 2 ರಿಂದ 76 ರವರೆಗಿನ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

2 ರಿಂದ 76ರ ವರೆಗಿನ ಖಂಡಗಳು ವಿಧೇಯಕದ ಅಂಗವಾದವು

ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು: ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂಬುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ.

ಪ್ರಸ್ತಾವದ ಅಂಗೀಕಾರ

ಡಾ॥ ವಿ. ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು): ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2011ನೇ ಸಾಲಿನ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಗಿದೆ

ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2011ನೇಸಾಲಿನ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(2) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ಎರಡನೇ ತಿದ್ದುಪಡಿ) ವಿಧೇಯಕ 2011

ಡಾ॥ ವಿ. ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮುಜರಾಯಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ಪುನರ್ ಅಂಗೀಕೃತವಾದ ರೂಪದಲ್ಲಿರುವ 2011ನೇ ಸಾಲಿನ ಕರ್ನಾಟಕ ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪುನರ್